
# ಕಾನನ

ಸೆಪ್ಟೆಂಬರ್ 2017

ನಿಸರ್ಗದೆಡೆಗೆ ಪಯಣ



BANNERUGHATTA

**WILDLIFE CONSERVATION GROUP**

# ಕಾನನ

ನಿಸರ್ಗದೆಡೆಗೆ ಪಯಣ

ಮುಖಪುಟ

ಪ್ರೆಟ್ಜ್ಲ್ ಸ್ಲಿಮ್ ಮೊಲ್ಡ್



© ಕಾರ್ತಿಕ್ .ಎ .ಕೆ

ಸೆಪ್ಟೆಂಬರ್ 2017

WILDLIFE
CONSERVATION
GROUP



* ವಿಸ್ಮಯ ಜೀವಿ... ಅಣಬೆ
* ರೈತ ಅಣಬೆ!
* ಭೂ ನಕ್ಷತ್ರ
* (ಭೂ)ಮಾತೆ (ಕವನ)
* ಪ್ರಕೃತಿ ಬಿಂಬ


**ಲೇಖಕ ವೃಂದ**

ಅಲೋಕ ಬಲ್ಲಾಳಾ

ಜೈಕುಮಾರ್ .ಆರ್

ಅಶ್ವಥ .ಕೆ .ಎನ್

ನಂದಕುಮಾರ್ ಹೊಳ್ಳ .ಎಸ್

ವಿಪಿನ್ ಬಾಳಿಗ



**ವಿನ್ಯಾಸ**

ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**

ವಿನೋದ್ ವೇಣುಗೋಪಾಲ್

**ಪರಿಷ್ಕರಣೆ**

ಮುರಳಿ .ಎಸ್

ರೂಪಶ್ರೀ ಕಲ್ಲಿಗನೂರ್

**ಕರಡು ತಿದ್ದುಪಡಿ**

ಡಾ.ದೀಪಕ್ ಭದ್ರಶೆಟ್ಟಿ, ಮೈಸೂರು



© ಕಾರ್ತಿಕ್ .ಎ .ಕೆ



© ಅಶ್ವಥ .ಕೆ .ಎನ್ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

ಕೆಲವು ಅಣಬೆಗಳನ್ನು ನೀವು ನೀಲಗಿರಿಯಂತಹ ತೋಪುಗಳಲ್ಲಿ ನೋಡಿರಬೇಕು. ಚೆಂಡಿನಾಕಾರದ ಮೇಲ್ಮೈ ರಚನೆ ಹೊಂದಿದ್ದು, ಹಳದಿ, ಮಾಸಲು ಬಿಳಿ ಇತ್ಯಾದಿ ಬಣ್ಣಗಳಿಂದ ಕೂಡಿರುತ್ತವೆ.  ಇವುಗಳನ್ನು ನೀವು ಅಣಬೆಬಾಂಬ್ ಎಂದು ಕಿತ್ತು ನೆಲಕ್ಕೆ ಜೋರಾಗಿ ಎಸೆದು ಅದರಿಂದ ಏಳುವ ಹೊಗೆಯನ್ನು ನೋಡಿದ್ದೀರಿ. ಅಣಬೆಗಳು ದಪ್ಪವಾದ ಹೊರಪದರ ಹೊಂದಿದ್ದು, ಬೀಜೋತ್ಪತ್ತಿ ಒಳಗಡೆಯೇ ನಡೆಯುತ್ತದೆ. ಕಾಡಿನಲ್ಲಿ ಪ್ರಾಣಿಗಳು ಇವುಗಳನ್ನು ತುಳಿದಾಗ ಮತ್ತು ಕೆಲವೊಮ್ಮೆ ಒತ್ತಡದಿಂದ ಬೀಜಗಳು ತಾವಾಗಿಯೇ ಹೊರಚಿಮ್ಮಿ ಬೀಜ ಪ್ರಸಾರವಾಗುತ್ತದೆ. ಭೂ ಚೆಂಡುಗಳು ಇತರೆ ಅಣಬೆಗಳಿಗಿಂತ ಭಿನ್ನವಾಗಿದ್ದು, ಶಿಲೀಂಧ್ರ ವರ್ಗೀಕರಣದಲ್ಲಿ ಗ್ಯಾಸ್ಟ್ರೊಮೈಸೆಟ್ಸ್ ವರ್ಗಕ್ಕೆ ಸೇರಿವೆ. ಇವುಗಳಲ್ಲಿಯೂ ಸಹ ಸಾಮಾನ್ಯ ಅಣಬೆಗಳಂತೆ ಬೇರೆ ಬೇರೆ ಜಾತಿಗಳಿದ್ದು, ಅವುಗಳಲ್ಲಿ ಕ್ಯಾಲ್ವೇಸಿಯಾ ಜಿಂಗಾಂಸಿಯಾ ಎನ್ನುವುದು ಜಗತ್ತಿನಲ್ಲಿ ಅತಿದೊಡ್ಡ ಭೂಚೆಂಡು ಅಣಬೆ ಎಂದು 1991ರಲ್ಲಿ ಗಿನ್ನಿಸ್ ದಾಖಲೆಯನ್ನೂ ಸೇರಿದೆ.



# ವಿಸ್ಮಯ ಜೀವಿ... ಅಣಬೆ

ಧರೆಗೆ ಮಳೆಯ ಸಿಂಚನವಾಗುತ್ತಿದ್ದಂತೆ ಭೂಗರ್ಭದಿಂದ ಹೊರಬಂದು ಎಲ್ಲರಿಗೂ ಅಚ್ಚರಿ ಮೂಡಿಸುವ ಜೀವಿ ಅಣಬೆ ನಾಯಿಕೊಡೆ...!! ಅಣಬೆಗಳು ಸಿಡಿಲು ಹಾಗೂ ಭೂಮಿಯ ಮಿಲನದಿಂದ ಜನಿಸಿವೆ ಎನ್ನುತ್ತಾರೆ ಗ್ರೀಕರು. ಮಳೆಯಾದ ನಂತರ ಗುಡುಗಿನ ಅಬ್ಬರಕ್ಕೆ, ವಾತಾವರಣದ ಬದಲಾವಣೆ ಅನುಗುಣವಾಗಿ ನೈಸರ್ಗಿಕವಾಗಿ ಹುಟ್ಟುವ ಪ್ರಕೃತಿಯ ಕೊಡುಗೆಯೇ ಈ ಅಣಬೆಗಳು. ಸಾಮಾನ್ಯವಾಗಿ ಜುಲೈ- ಆಗಸ್ಟ್ ತಿಂಗಳಲ್ಲಿ ಸಹಜವಾಗಿ ಬೆಳೆಯುವ ಈ ಅಣಬೆಗಳನ್ನು ನಾವು ಹೊಲದ ಬದುಗಳಲ್ಲಿ, ಬೆಟ್ಟ-ಗುಡ್ಡಗಳಲ್ಲಿ, ಬಯಲುಗಳಲ್ಲಿ ಹೆಚ್ಚಾಗಿ ಕಾಣಬಹುದು. ಇವುಗಳಲ್ಲಿ ಹಲವಾರು ನಮೂನೆಗಳಿದ್ದು, ಕೆಲವೊಂದು ವಿಷಪೂರಿತವಾಗಿದ್ದು ಸೇವನೆಗೆ ಯೋಗ್ಯವಲ್ಲ.



ಅಣಬೆ, ಸಸ್ಯವೂ ಅಲ್ಲದ ಪ್ರಾಣಿಯೂ ಅಲ್ಲದ ಶಿಲೀಂಧ್ರ ಜಾತಿಯ ಜೀವಿ, ಸಸ್ಯ ಅಥವಾ ಪ್ರಾಣಿಗಳ ಬೆಳವಣಿಗೆ ಕೋಶ ವಿಭಜನೆಯಿಂದ ನಡೆಯುತ್ತದೆ. ಆದರೆ ಶಿಲೀಂಧ್ರ ಗುಂಪಿನ ಸದಸ್ಯನಾದ ಅಣಬೆಗೆ ಕೋಶ ವಿಭಜನೆಯ ಹಂಗಿಲ್ಲ. ನಮಗೆ ಕಾಣುವುದು ಅದರ ಬೀಜಕ ಗಳಿರುವ ಭಾಗ ಮಾತ್ರ. ಅದನ್ನು ಅಣಬೆಯ ಹಣ್ಣು ಎನ್ನಲು ಅಡ್ಡಿಯಿಲ್ಲ. ಹಾಗೆ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳಲು ಸುಮಾರು ದಿನ ಬೇಕಾಗಿರುತ್ತದೆ. ಕೊಳೆತ ವಸ್ತುವಿನ ಒಳಭಾಗದಲ್ಲಿ ಬೆಳವಣಿಗೆಗೆ

ಬೇಕಾದ ಸರ್ವಸಿದ್ಧತೆಗಳು ಸಾವಕಾಶವಾಗಿ ಆದನಂತರ ವಾತಾವರಣದ ತೇವಾಂಶ, ಉಷ್ಣಾಂಶ ಎಲ್ಲವೂ ಸಮರ್ಪಕವಾಗಿದ್ದಾಗ ಬೀಜಕಗಳು ಹೊರಗೆ ಕಾಣಿಸಿಕೊಳ್ಳುತ್ತವೆ.



ನಾವು ಮೊದಲಿಗೆ ಗಮನಿಸುವಾಗ ಕೆಲ ಮಿಲಿಮೀಟರ್ ಗಾತ್ರದ ಮೊಗ್ಗಿನಂತಹದರಲ್ಲಿಯೇ ಅದರ ಬೆಳವಣಿಗೆಗೆ ಬೇಕಾದ ಕೋಶಗಳನ್ನು ಹೊಂದಿರುತ್ತದೆ. ಪೂರ್ಣ ಬೆಳೆದ ಅಣಬೆಗೆ ಬೇಕಾಗುವ ಎಲ್ಲಾ ಕೋಶಗಳೂ ಬೀಜಕದಲ್ಲಿ ಮೊದಲೆ ಸಿದ್ಧವಿರುವುದರಿಂದ ಕೇವಲ ಗಾಳಿ ಹಾಗೂ ನೀರಿನ ಅಂಶವನ್ನು ಹೀರಿ ಬೀಜಕವು ಬಲೂನೂ ಉಬ್ಬಿದಂತೆ ಉಬ್ಬಿ ನಾವು ನೋಡುವ ಆಕಾರಕ್ಕೆ ಬರುತ್ತದೆ. ಅಣಬೆಯನ್ನು ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಬಹಳ ಸಡಿಲಾಗಿ ಹೆಣೆದ ಕೋಶಗಳಿಂದ ಕೂಡಿ ಅದು ಸಂಪೂರ್ಣ ಟೊಳ್ಳಾಗಿರುವುದನ್ನು ಕಾಣುತ್ತೇವೆ ಅದರ ಛತ್ರಿಯಂತಹ ಆಕಾರದ ಅಡಿಯಲ್ಲಿ ಅದರ ಸಂತಾನೋತ್ಪತ್ತಿಗೆ ಕಾರಣವಾಗುವ ಬೀಜಕಗಳು ಅಡಗಿರುತ್ತವೆ ಮತ್ತು ಪ್ರಸಾರವಾಗುತ್ತವೆ. ಅಣಬೆ ಬೆಳೆದಂತೆ ಹೊರ ಪದರ ಒಳಪದರ ಹಾಗೂ ಬೀಜಕಗಳು ಸಂಗ್ರಹವಾಗುತ್ತವೆ. ಅಲ್ಲದೇ ಹರಕಲು-ಮುರುಕುಲಾದ ಹೊರ ಪದರ ನಿರ್ಮಾಣವಾಗುತ್ತದೆ. ಒಳಪದರ ಒಣಗಿ ತೊಗಲಿನಂತಾಗುತ್ತದೆ. ಅಣಬೆ ಗಾತ್ರಗಳಲ್ಲಿ ತನ್ನ ವೈಪರೀತ್ಯವನ್ನು ಸಾಧಿಸಿದೆ. ಚಿಕ್ಕ ಕೂದಲೆಳೆಯಿಂದ ಕುಂಬಳಕಾಯಿ ಗಾತ್ರದಷ್ಟು ಬೆಳೆಯುತ್ತವೆ. ಅದರ ಜೀವಿತದ ಉದ್ದೇಶ ಮುಗಿದ ಅಲ್ಪಕಾಲದಲ್ಲೇ ಕೊಳೆತು ಮುದ್ದೆಯಾಗಿ ಮಣ್ಣಾಗಿ ಸಾಯುತ್ತದೆ.

ಮಾನವ ಜನಾಂಗಕ್ಕೆ ಅಣಬೆಗಳು ಬಹು ಹಿಂದಿನಿಂದಲೂ ಗೊತ್ತು. ಸುಮಾರು ಎರಡು ಸಾವಿರ ಶಿಲೀಂಧ್ರಗಳ ಪ್ರಭೇದಗಳನ್ನು ಕೆಲವು ಆದಿವಾಸಿಗಳು ಆಹಾರವಾಗಿ, ಔಷಧಿಯಾಗಿ ಬಳಸುತ್ತಿದ್ದಾರೆ. ಅಣಬೆಗಳು ಹಲವಾರು ರೀತಿಯಲ್ಲಿ ಮಾನವ ಜನಾಂಗದ ಮೇಲೆ ಪ್ರಭಾವ ಬೀರಿದೆ. ಕಲಾವಿದರಿಗೆ ಸೌಂದರ್ಯದ ಪ್ರತೀಕದಂತೆ, ಹಾಗೂ ವೈದ್ಯರಿಗೆ ಹೊಸ ಔಷಧಿಯ ಗಣಿಯಂತೆ, ವಾಸ್ತು ಶಿಲ್ಪಿಗಳು ಹಲವಾರು ಕಟ್ಟಡಗಳನ್ನು ಅಣಬೆಯಾಕಾರದಲ್ಲಿ ನಿರ್ಮಿಸಿದ್ದಾರೆ ಮತ್ತು ರತ್ನದ ವ್ಯಾಪಾರಿಗಳು ಅಣಬೆಯಾಕಾರದ ಕೆತ್ತನೆಗಳನ್ನು ಮಾಡಿ

ಜನರನ್ನು ಬೆರಗುಗೊಳಿಸಿದ್ದಾರೆ, ಕಲಾವಿದರು ಅಣಬೆಗಳ ವಿವಿಧ ಬಗೆಯ ಆಕಾರಗಳನ್ನು, ಬಟ್ಟೆಗಳ ಮೇಲೆ ಮುದ್ರಿಸಿದ್ದಾರೆ.

ರೋಮನ್ ರು ಪ್ರಾಚೀನ ಕಾಲದಲ್ಲಿಯೇ ಅಣಬೆಗಳ ಭಕ್ಷ್ಯಗಳನ್ನು ತಯಾರಿಸಿ ನೆಂಟರಿಷ್ಟರಿಗೆ ಉಣಬಡಿಸುತ್ತಿದ್ದರಂತೆ. ಹಾಗೆಯೇ ತಿನ್ನುವ ಅಣಬೆಗಳನ್ನು ಹುಡುಕಿ ತೆಗೆಯುವ ಸಲುವಾಗಿ ನಾಯಿ, ಕರಡಿ, ಹಂದಿಗಳನ್ನು ಸಾಕಿದ ನಿದರ್ಶನಗಳೂ ಇವೆ.

ಅಣಬೆ ಸಸ್ಯಹಾರವೋ? ಮಾಂಸಹಾರವೋ? ಎಂಬ ಪ್ರಶ್ನೆ ಇಂದಿಗೂ ಬಿಡಿಸಲಾಗದ ಒಗಟಾಗಿದೆ. ಆದರೆ ಮಾಂಸದ ಸವಿಯನ್ನು ನೀಡುವ ಈ ಶಿಲೀಂಧ್ರ, ಹಣ್ಣು ತರಕಾರಿಗಳಿಗಿಂತಲೂ ಅಧಿಕ ಪ್ರಮಾಣದ ಪ್ರೋಟೀನ್ ಮತ್ತು ಕಬ್ಬಿಣಾಂಶವನ್ನು ಹೊಂದಿದೆ. ಅಣಬೆಗಳಲ್ಲಿರುವ ಪ್ರೋಟೀನುಗಳು ಪ್ರಾಣಿ ಹಾಗೂ ಸಸ್ಯಗಳಲ್ಲಿರುವ ಮಧ್ಯದ ಪ್ರೋಟೀನ್ ಗಳು, ಧಾನ್ಯಗಳಲ್ಲಿ ಸಾಮಾನ್ಯವಾಗಿ ದೊರೆಯುವ ಅತ್ಯಾವಶ್ಯಕವಾದ ವೈಸಿನ್ ಮತ್ತು ಟ್ರಿಪ್ರೋ ಎಂಬ ಎರಡು ಅಮಿನೊ ಆಮ್ಲಗಳು ಹಾಗೂ ಹೆಚ್ಚು ಪ್ರೋಟಿನ್ ಇರುವುದರಿಂದ ಸಕ್ಕರೆ ಕಾಯಿಲೆಯಿಂದ ಬಳಲುವವರಿಗೆ ಅತ್ಯುತ್ತಮ ಆಹಾರ.  ಇದು ಸುಲಭವಾಗಿ ಜೀರ್ಣವಾಗುವುದರಿಂದ ಶಾಕಾಹಾರಿಗಳಲ್ಲಿ ಅಣಬೆ ಪ್ರೋಟೀನ್ ಬಹಳ ಮಹತ್ವದ್ದಾಗಿದೆ.



70 ಕಿಲೋಗ್ರಾಮ್ ತೂಕವಿರುವ ಮಾನವನಿಗೆ 100-200 ಗ್ರಾಮ್ (ಒಣ ತೂಕ) ಅಣಬೆಯು ಎಲ್ಲಾ ಪೋಷಕಾಂಶಗಳನ್ನು ಒದಗಿಸುತ್ತದೆ ಎಂದು ವಿಜ್ಞಾನಿಗಳ ಅಭಿಪ್ರಾಯ. ಅಣಬೆಯ ಪೋಷಕಾಂಶಗಳ ಮಟ್ಟವು ಸ್ನಾಯುಗಳಲ್ಲಿರುವ ಪ್ರೋಟಿನ್ ಗೆ ಸಮ ಎಂದು ಗೊತ್ತಾಗಿದೆ. ಪ್ರೋಟೀನ್ ಲಭ್ಯವಿರುವ ಆಹಾರಕ್ಕೆ ಇದು ಪೂರಕವಾದ ಆಹಾರವಾಗಿರುವುದರಿಂದ, ಅಣಬೆಗೆ 'ತರಕಾರಿ ಮಾಂಸ' ಎಂದು ಕರೆಯುತ್ತಾರೆ. ಅಣಬೆಗಳಲ್ಲಿರುವ ಪ್ರೋಟೀನ್ ಗಳಲ್ಲಿ ಎಲ್ಲ 21 ಬಗೆಯ ಅಮಿನೋ ಆಮ್ಲಗಳಿವೆ.

ಅಣಬೆಗಳ ಬಗ್ಗೆ ಹಲವಾರು ಕಥೆ ಹಾಗು ಜಾನಪದ ನಂಬಿಕೆಗಳಿವೆ. ಕೆಲವು ಅಣಬೆಗಳು ತಿನ್ನಲು ಯೋಗ್ಯ. ಇನ್ನು ಕೆಲವು ಮಹಾ ವಿಷಕಾರಿ. ವಿಷಕಾರಿ ಅಣಬೆಗಳಿಗೆ ಕಾಡುಕಪ್ಪೆಯ ಮಲ ಎಂದು ಕರೆಯುತ್ತಾರೆ. ತಿನ್ನುವ

ಹಾಗು ವಿಷಕಾರಿ ಅಣಬೆಗಳ ನಡುವಿನ ಅಂತರ ತಿಳಿಯದೆ, ವಿಷಾಕಾರಿ ಅಣಬೆಗಳನ್ನು ತಿಂದು ಅನೇಕರು ತೊಂದರೆಗೊಳಗಾಗಿದ್ದಾರೆ. ಪ್ರಾಣಹಾನಿಯಾದ ಉದಾಹರಣೆಗಳೂ ಸಾಕಷ್ಟಿವೆ. ವಿಷಕಾರಿ ಅಣಬೆಗಳನ್ನು ಕಂಡು ಹಿಡಿಯುವ ನಿರ್ದಿಷ್ಟವಾದ ಮಾರ್ಗಗಳಿಲ್ಲದಿದ್ದರೂ, ಕೆಲವು ಸಾಂಪ್ರದಾಯಿಕ ವಿಧಾನಗಳು ಬಳಕೆಯಲ್ಲಿವೆ. ಅಂದರೆ ಹುಲ್ಲು ಬಣವೆಗಳಲ್ಲಿ ಬೆಳೆದ ಅಣಬೆಗಳು ತಿನ್ನಲು ಯೋಗ್ಯ. ಕೊಳಚೆ, ಹುತ್ತದ ಬಳಿ ಬೆಳೆದ ಹಾಗು ವಿಷದ ಹಣ್ಣು ಬಿಡುವ ಮರದ ಮೇಲೆ ಬೆಳೆದ ಬಿಳಿ ಅಣಬೆಗಳನ್ನು ತಿನ್ನಬಹುದಾದರೂ ಕೆಲವೊಂದು ಜಾತಿಗಳು ವಿಷದ ಬಟ್ಟಲುಗಳಾಗಿವೆ. ಒಂದೇ ಜಾತಿಯ ಅಣಬೆಗಳಲ್ಲಿ ತಿನ್ನುವ ಹಾಗೂ ವಿಷಯುಕ್ತ ಅಣಬೆಗಳಿರುವುದು ಸೋಜಿಗದ ಸಂಗತಿ.



ವಿಷಕಾರಿ ಅಣಬೆಗಳನ್ನು ಸೇವಿಸುವುದರಿಂದ ಅಣಬೆಯ ವಿಷವು ನರ ಮತ್ತು ಯಕೃತ್ತಿನ ಕೋಶಗಳನ್ನು ನಾಶಮಾಡುತ್ತದೆ. ಜಠರವನ್ನು ತೊಂದರೆಗೀಡು ಮಾಡುತ್ತದೆ. ಜೀರ್ಣವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಣಬೆಯ ವಿಷದಿಂದ ಬಳಲುತ್ತಿರುವ ವ್ಯಕ್ತಿಯನ್ನು ತಕ್ಷಣ ವೈದ್ಯರಲ್ಲಿ ಕರೆದುಕೊಂಡು ಹೋಗಬೇಕು. ಉದರ ಸೇರಿದ ಅಣಬೆಯ ವಿಷವನ್ನು ಕಡಿಮೆ ಮಾಡುವುದು, ನೋವನ್ನು ಶಮನಗೊಳಿಸುವುದು ರೋಗಿಯ ಹೃದಯ ಬಡಿತದ ಮೇಲೆ ನಿಗಾ ಇಡುವುದು ಮೊದಲಾದ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಕೆಲವು ಅಣಬೆಗಳು

ಹೃದಯ ರಕ್ತನಾಳ, ಕ್ಯಾನ್ಸರ್, ವೈರಲ್, ಬ್ಯಾಕ್ಟೀರಿಯಾ ಹಾಗು ಸಿಹಿ ಮೂತ್ರ ರೋಗಗಳಿಗೆ ರಾಮಬಾಣವಾಗಿದೆ ಎನ್ನಬಹುದು.



**ಅಣಬೆಗಳ ಕೆಲಸತ್ಯ ಹಾಗು ಮಿಥ್ಯಗಳು**

- ಎಲ್ಲಾ ಬಿಳಿ ಅಣಬೆಗಳು ತಿನ್ನಲು ಯೋಗ್ಯವೆಂಬ ಮಾತಿದೆ. ಆದರೆ ಇದು ಸರಿಯಲ್ಲ. ಕೆಲವು ಬಿಳಿ ಅಣಬೆಗಳು ವಿಷಕಾರಿಯಾಗಿವೆ. ಉದಾ: ಅಮಾನಿಟಾ ಎಕ್ಸಿಟಿಯಾಲಿಸ್.
- ವಿಷಕಾರಿ ಅಣಬೆಗಳನ್ನು ನೀರಿನಲ್ಲಿ ಕುದಿಸಿ, ಬೆಳ್ಳಿಚಮಚದಿಂದ ಕಲಸಿದರೆ, ಚಮಚ ಕಪ್ಪಾಗುತ್ತದೆ, ಎಂಬ ನಂಬಿಕೆಯಿದೆ. ಆದರೆ ಇದಕ್ಕೆ ಯಾವುದೇ ವೈಜ್ಞಾನಿಕ ಆಧಾರವಿಲ್ಲ.
- ಸರಿಯಾಗಿ ಕುದಿಸಿರೆ ಯಾವುದೇ ಅಣಬೆಯನ್ನು ತಿನ್ನಬಹುದು ಎಂದು ಹೇಳುತ್ತಾರೆ. ಇದು ಸುಳ್ಳು, ಕುದಿಸುವುದರಿಂದ ಅಣಬೆಯಲ್ಲಿನ ವಿಷ ಹೋಗುವುದಿಲ್ಲ.
- ಕೀಟಗಳು ವಿಷಕಾರಿ ಅಣಬೆಗಳನ್ನು ಗುರುತಿಸುತ್ತವೆ ಹಾಗೂ ಅವುಗಳಿಂದ ದೂರ ಇರುತ್ತವೆ ಎನ್ನುವ ಮಾತಿದೆ. ಆದರೆ ಕೆಲವು ವಿಷಕಾರಿ ಅಣಬೆಗಳಲ್ಲಿ ಕೆಲವು ಕೀಟಗಳು ಮೊಟ್ಟೆಗಳಿನ್ನಿಡುತ್ತವೆ.
- ಹುಳಿ, ಒಗರು, ಕೆಟ್ಟುಹೋದ ಅಣಬೆಗಳು ವಿಷಕಾರಿ. ಅಮೊನಿಟಾ ಎಕ್ಸಿಟಿಯಾಲಿಸ್ ಅಣಬೆ ಮಹಾವಿಷಕಾರಿ.

- ಎಲ್ಲಾ ವಿಷಕಾರಿ ಅಣಬೆಗಳ ಟೋಪಿ (ತುದಿ) ಚೂಪಾಗಿರುತ್ತದೆ ಎಂದು ಜನ ನಂಬಿದ್ದಾರೆ. ಇದು ತಪ್ಪು ಗ್ರಹಿಕೆ. ಪಶ್ಚಿಮಘಟ್ಟ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಮೂಗುತಿ ಅಣಬೆ ಗಾತ್ರದಲ್ಲಿ ಸಣ್ಣದಾಗಿದ್ದು ತುದಿ (ಟೋಪಿ) ಮೂಗುತಿಯಂತೆ ಚೂಪಾಗಿದ್ದು ನೋಡಲು ಬಲು ಆಕರ್ಷಕ ಮತ್ತು ಉತ್ತಮ ರುಚಿಯನ್ನು ಹೊಂದಿದೆ.

**ತಿನ್ನುವ ಕೆಲವು ಅಣಬೆಗಳು**

ಅಸ್ಟ್ರೈಯಸ್, ಅರಿಕ್ಯುಲೇರಿಯ, ಕೇವೇಶಿಯಾ, ಕ್ಯಾಂಥರೆಲ್ಲಸ್, ಲೈಕೊಪೆರೆಡಾನ್, ಮೋರ್ಬೆಲ್ಲಾ, ಶಿಝೋಫಿಲ್ಲಮ್, ಟೆರ್ಮಿಟೋಮೈಸಿಸ್, ಟ್ಯೂಬರ್ಸ್, ಅಗಾರಿಕಸ್ ಬೈಸ್ಪೋರಸ್, ವೋಲ್ವರಿಯೆಲ್ಲಾ ವೊಯೆಸಿಯಾ ಮತ್ತು ಪ್ಲೊರೋಟಸ್ ಸಜೋರಕಾಜು ಇತ್ಯಾದಿ ಫೆಲಸ್ ಇಂಡುಸಿಯೇಟಸ್.

**ಕೆಲವು ವಿಷಾಕಾರಿ ಅಣಬೆಗಳು**

ಒಂಫಲೋಟಸ್, ಮೈಸೀನಾ, ಕ್ಲೋರೋಫಿಲ್ಲಮ್, ಗೆಲೆರಿನಾ ಮೊರ್ಜಿನೇಟಾ, ಫಾಲ್ಸ್ ಮೊರೆಲ್, ಡೆಸ್ಟ್ರಾಯಿಂಗ್ ಎಂಜೆಲ್ ಇತ್ಯಾದಿಗಳು...



- ಅಲೋಕ ಬಲ್ಲಾಳಾ
ಚಿತ್ರದುರ್ಗ ಜಿಲ್ಲೆ






# ರೈತ ಅಣಬೆ!

“ಮೊನ್ನೆಯಿಂದ ಒಳ್ಳೆ ಮಳೆ ಬಂದದೆ. ಹುಡುಕಿದರೆ ಒಂದೆರೆಡು ಅಣಬೆ ಸಿಗ್ಬಹುದು. ನಾಳೆ ಅಣಬೆ ಸಾರೆ ಮಾಡೇ….” ಎಂದು ನನ್ನ ತಂದೆ ಅಮ್ಮನಿಗೆ ಹೇಳುತ್ತಿರುವಾಗಲೇ, ನನ್ನ ಬಾಯಲ್ಲಿ ಆದ ಬದಲಾವಣೆಗಳನ್ನು ಗಮನಿಸಬಹುದಾಗಿತ್ತು. ಅಣಬೆ ಸಾರು ತಿಂದು ಎಷ್ಟೋ ದಿನಗಳಾಗಿದ್ದರಿಂದಲೋ ಏನೋ ಈ ಮಾತುಗಳ ಕೇಳಿದ ನನಗೆ ಏನೋ ಖುಷಿ. ನನ್ನ ತಂದೆ ಒಬ್ಬ ರೈತ, ಸಾಮಾನ್ಯವಾಗಿ ನಾವು ರಾಗಿ, ಶೇಂಗಾ ಮತ್ತು ಕೆಲವು ತರಕಾರಿ ಬೆಳೆಗಳನ್ನು ಬೆಳೆಯುತ್ತೇವೆ. ಕೆಲವು ರೈತರು ಅಣಬೆಯನ್ನೇ ಒಂದು ಬೆಳೆಯಾಗಿ ಕೂಡ ಬೆಳೆಯುತ್ತಾರೆ. ಆದ್ದರಿಂದಲೇ ನಮಗೆ ಕೆಲವು ಮಾಲ್ ಗಳಲ್ಲಿ ಮತ್ತು ತರಕಾರಿ ಮಳಿಗೆಗಳಲ್ಲಿ ಪ್ಯಾಕೆಟ್ ಗಳಲ್ಲಿ ಅಣಬೆ ದೊರೆಯುತ್ತವೆ. ಆದರೆ…… ‘ಅಣಬೆಗಳೇ ರೈತನಾಗಿ ಬೆಳೆ ಬೆಳೆಯುತ್ತವೆ’ ಎಂದರೆ ಅದು ಹುಬ್ಬೇರಿಸುವ ಸಂಗತಿಯೇ ಸರಿ.

ನಮ್ಮ ಭೂಮಿಯ ಇಷ್ಟು ಜೀವಿಗಳಲ್ಲಿ ಮಾನವನೇ ಮೊದಲ ರೈತ. ವ್ಯವಸಾಯ ಮನುಷ್ಯನ ಮೊದಲ ಕಸುಬು ಅಂದುಕೊಂಡಿರುವ ನಮಗೆ ಅದು ಅಷ್ಟು ಸರಿಯಲ್ಲ ಎಂಬುದು ಆಶ್ಚರ್ಯ ಎನಿಸಬಹುದು. ಹೌದು, ಜೀವ ವಿಕಾಸದಲ್ಲಿ ನಾವು ಬರುವ ಎಷ್ಟೋ ಸಾವಿರ ವರ್ಷಗಳ ಮುಂಚೆಯೇ ಬಂದಂತಹ ಕೆಲವು ಇರುವೆಗಳು ಶಿಲೀಂಧ್ರಗಳನ್ನು ಎಲೆಗಳ ಮೇಲೆ ಅವುಗಳ ಇರುವೆ ಗುಂಪುಗಳಿಗೆ ಆಹಾರವಾಗಿ ಬೆಳೆಯುತ್ತಿದ್ದವಂತೆ. ಹಾಗೆಯೇ ‘ಒಂದು ಬೆಳೆ’ಯಾಗಿ ಇಷ್ಟು ದಿನ ನಮಗೆ ಕಂಡಿರುವ ಈ ಅಣಬೆಯೇ ರೈತನಂತೆ ಕೆಲವು ಬ್ಯಾಕ್ಟೀರಿಯಾಗಳನ್ನು ಬೆಳೆಯುತ್ತವೆ ಎಂಬುದು ತಾಜಾ ಸುದ್ದಿ.

ಅಣಬೆಗಳಿಗೆ ಒಬ್ಬ ರೈತನ ಗುಣ ಲಕ್ಷಣಗಳು ಇವೆಯೇ ಎಂದು ಪರೀಕ್ಷಿಸಲು ‘thick-footed morel’ ಎಂಬ ಅಣಬೆಯನ್ನು *Pseudomonas putida* ಎಂಬ ಸಾಮಾನ್ಯ ಮಣ್ಣಿನ ಬ್ಯಾಕ್ಟೀರಿಯಾದೊಂದಿಗೆ ಬಿಟ್ಟರು. ಅಣಬೆಗಳು ಅವುಗಳ ಕೆಲವು ಸ್ರವಿಕೆಗಳಿಂದ *(fungal secretions)* ಬ್ಯಾಕ್ಟೀರಿಯಾಗೆ ಆಹಾರವಾಗಿ ನೀಡಿ ಪೋಷಿಸುತ್ತವೆ, ಹಾಗೆಯೇ ತಮಗೆ ಬೇಕಾದ ಇಂಗಾಲವನ್ನು ಬಾಕ್ಟೀರಿಯಗಳಿಂದ ಪಡೆಯುತ್ತವೆ, ಎಂಬುದು ಇವರ

ಅನಿಸಿಕೆಯಾಗಿತ್ತು. ಇದನ್ನು ಖಚಿತಪಡಿಸಿಕೊಳ್ಳಲು ಇವೆರೆಡರ ಪೋಷಕಾಂಶಗಳ ಚಲನವಲನಗಳನ್ನು ಗಮನಿಸುತ್ತಿದ್ದರು. ಆಗ ತಿಳಿದು ಬಂದದ್ದು ಅಣಬೆಯ ಇಂಗಾಲವು *ಬ್ಯಾಕ್ಟೀರಿಯಾದಲ್ಲಿತ್ತು,* ಅಷ್ಟೇ ಅಲ್ಲದೆ ಅಣಬೆಯು ಬ್ಯಾಕ್ಟೀರಿಯಾವನ್ನು ಕೊಯ್ಲು ಸಹ ಮಾಡುತ್ತವೆ, ಎನ್ನುತ್ತಾರೆ ಮುಲ್ಲರ್ (Ulrich Mueller of the University of Texas). ಹೀಗೆ ಬ್ಯಾಕ್ಟೀರಿಯಾ ಸಂಖ್ಯೆಯು ಕ್ಷೀಣಿಸುತ್ತಾ ಹೋಗುತ್ತದೆ. ಇದೇ ಸಮಯದಲ್ಲಿ ಈ ಅಣಬೆಯು ಸ್ಕ್ಲೆರೋಶಿಯ(sclerotia) ಎಂಬ ಅಂಗವನ್ನು ಬೆಳೆಸಿಕೊಳ್ಳುತ್ತವಂತೆ. ಈ ಸ್ಕ್ಲೆರೋಶಿಯ ಇಂತಹ ಬ್ಯಾಕ್ಟೀರಿಯಾದಿಂದ ಪಡೆದ ಪೋಷಕಾಂಶಗಳನ್ನು ಇಲ್ಲಿ ಶೇಖರಿಸಿ ಇಡುತ್ತವೆ ಎಂಬುದೂ ಸಹ ಕಂಡುಹಿಡಿದಿದ್ದಾರೆ.



***ತಿಕ್ ಫೂಟೆಡ್ ಮೋರೆಲ್ ಅಣಬೆಯ ಬೇರಿನ ಸುತ್ತಾ ಬೆಳೆದಿರುವ ಸುಡೋಮೊನಸ್ ಪುಟಿಡ ಬ್ಯಾಕ್ಟೀರಿಯಾ (ಹಸಿರು ಬಣ್ಣ)***


ಕೇವಲ ಇಷ್ಟೇ ಅಲ್ಲದೆ ಈ ತಿಕ್ ಫೂಟೆಡ್ ಮೋರೆಲ್ ಅಣಬೆಯ ಬೇರಿನಂತಹ ಅಂಗಗಳು ಬ್ಯಾಕ್ಟೀರಿಯಾಗಳಿಗೆ ಒಳ್ಳೆ ರಹದಾರಿಯಾಗಿದೆ. ಇದರಿಂದಲೂ ಸಹ ಅಣಬೆಗೆ ಬೇರೆ ಬೇರೆ ಪ್ರದೇಶದ ಆಹಾರವು ದೊರಕುತ್ತವೆಯಂತೆ. ನಮಗೀಗಾಗಲೇ ತಿಳಿದಂತೆ ಅಣಬೆಯ ಆಹಾರ ಕೇವಲ ಈ ಬ್ಯಾಕ್ಟೀರಿಯಾದಿಂದ ಅಲ್ಲದೇ, ಕೆಲ ಸಸ್ಯಗಳು ಮತ್ತು ಸಸ್ಯಗಳ ಅವಶೇಷಗಳಿಂದಲೂ ಆಹಾರ ಪಡೆಯುತ್ತವೆ ಮತ್ತು ಬೆಳೆದ ಬ್ಯಾಕ್ಟೀರಿಯಾದ ಕೊಯ್ಲಿನಿಂದ ಸಹ ಅಣಬೆಯ ಬೆಳವಣಿಗೆಯಲ್ಲಿ ತುಂಬಾ ವ್ಯತ್ಯಾಸವೇನೂ ಕಂಡುಬಂದಿಲ್ಲ. ಹಾಗಾದರೆ ಈ ಬ್ಯಾಕ್ಟೀರಿಯಾಗಳನ್ನು ಅಣಬೆಯು ರೈತನಂತೆ ಬೆಳೆಯುವ ಮೂಲ ಉದ್ದೇಶವೇನು?

ಇದಕ್ಕೆ ನಿಖರವಾದ ಉತ್ತರ ದೊರಕಲು ಇನ್ನು ಸ್ವಲ್ಪ ಗಂಭೀರವಾದ ಸಂಶೋಧನೆಯ ಅವಶ್ಯಕತೆ ಇದೆ ಎನ್ನುತ್ತಾರೆ ಪಿಲಾರ್ ಜೂನಿಯರ್(Pilar Junier). ಅದಕ್ಕಾಗಿಯೇ ಅವರು ಕೆಲವು ಪರೀಕ್ಷೆಗಳನ್ನು ಸ್ವಾಭಾವಿಕವಾಗಿ ಸಿಗುವ ಅಣಬೆ ಮತ್ತು ಬ್ಯಾಕ್ಟೀರಿಯಾಗಳ ಮೇಲೆ ಮಾಡಬೇಕು ಎಂದು ತಮ್ಮ ಮುಂದಿನ ಬೆಳವಣಿಗೆಯನ್ನು ತಿಳಿಸಲು ಹಂಬಲಿಸಿದ್ದಾರೆ. ಕೊನೆಗೆ ಅಣಬೆಯ ಈ ನಡವಳಿಕೆಗೆ ಅವರ ಕೊನೆಯ ಉತ್ತರ 'ನಾವು ಕಾಫಿಯನ್ನು ಕುಡಿಯದೆ ಬದುಕಬಹುದು' ಆದರೂ 'ಕಾಫಿ ಬೆಳೆಯುತ್ತೇವೆ!' ಎಂದು.

- ಜೈ ಕುಮಾರ್ .ಆರ್

ಡಬ್ಲ್ಯೂ.ಸಿ.ಜಿ, ಬೆಂಗಳೂರು.





# ಭೂ ನಕ್ಷತ್ರ

ನನಗೆ ಸರಿಯಾಗಿ ನೆನಪಿಲ್ಲ ಅದು 2013 ಇರಬೇಕು, ಶಂಕರಪ್ಪ ಮತ್ತೆ ನಾನು ಒಂದು ದಿನ ಬೆಳಿಗ್ಗೆ ಡೇವಿಡ್ ಅಟೆನ್ಬರೋರವರ ಸಸ್ಯಜಗತ್ತಿನ ಕುರಿತ "ದಿ ಪ್ರೈವೇಟ್ ಲೈಫ್ ಆಫ್ ಪ್ಲಾಂಟ್ಸ್" ಎಂಬ ಸಾಕ್ಷ್ಯಚಿತ್ರದ ಸರಣಿಯನ್ನು ನೋಡುತ್ತ ಕುಳಿತು ನಮ್ಮ ಬನ್ನೇರುಘಟ್ಟದಂತಹ ಕಾಡುಗಳಲ್ಲಿನ ಸಸ್ಯಸಂಕುಲದ ಬಗ್ಗೆ ಚರ್ಚೆ ಮಾಡತೊಡಗಿದೆವು. ಸಾಕ್ಷ್ಯಚಿತ್ರದ ಮೊದಲ ಸಂಚಿಕೆಯಲ್ಲಿ ಸಸ್ಯಗಳು ಹೇಗೆ ಚಲಿಸಬಲ್ಲವು ಎಂಬುದನ್ನು ತುಂಬ ಸುಂದರವಾಗಿ ವಿವರಿಸುತ್ತಾ ಹೋಗುತ್ತಾರೆ. ಕ್ಯಾಲಿಫೋರ್ನಿಯಾದ ಮರುಭೂಮಿಯ ಒಂದು ಸಸ್ಯ ಬರ್ಡ್ ಕೇಜ್ ಪ್ಲಾಂಟ್ (Birdcage plant) ಎಂಬ ಸಸ್ಯ ತನ್ನ ಬೀಜಪ್ರಸಾರ ಮಾಡಲು ಮರುಭೂಮಿಯ ಇಳಿಜಾರಿನಲ್ಲಿ ಗಾಳಿಯ ಸಹಾಯದಿಂದ ಗುಡುಗುತ್ತಾ ಚಂಡಿನಂತೆ ಸಾಗುವಾಗ ತನ್ನ ಸಣ್ಣ ಸಣ್ಣ ಬೀಜಗಳನ್ನು ಪ್ರಸಾರಮಾಡುತ್ತದೆ. ಆದರೆ ಈ ರೀತಿಯ ಸಸ್ಯಗಳನ್ನು ನಮ್ಮಲ್ಲಿ ನಾವು ಎಂದೂ ನೋಡಿಲ್ಲ... ಒಂದು ಪಕ್ಷ ಈ ರೀತಿಯ ಸಸ್ಯಗಳು ನಮ್ಮಲ್ಲಿ ಇದ್ದರೂ ಸಹ ಸುಲಭವಾಗಿ ಗುಡುಗಿ ಸಾಗಲು ಅಸಾಧ್ಯ.

ಕಾಡುಸೇವಂತಿಗೆ (Dandelion) ಸಸ್ಯಗಳು ನಮ್ಮ ಬನ್ನೇರುಘಟ್ಟದಂತ ಕಾಡುಗಳಲ್ಲಿ ಸರ್ವೆಸಾಮಾನ್ಯ. ಇವು ಮಳೆಗಾಲದಲ್ಲಿ ಬಲುಸುಂದರವಾದ ಹಳದಿ ಹೂಗಳನ್ನು ಬಿಟ್ಟು ಬೇಸಿಗೆ ಸಮೀಪಿಸಿದಂತೆ ಹೂಗಳು ಒಣಗಿ ನೂರಾರು ಬೀಜಗಳಿಂದ ಕೂಡಿದ ಚೆಂಡಾಗಿ, ಬೀಜಪ್ರಸಾರಕ್ಕೆ ಸಜ್ಜಾಗಿ ಗಾಳಿಯಲ್ಲಿ ಕೊಡೆವಿಮಾನ (Parachute)ಗಳಂತೆ ತೇಲಲು ಕಾಯುತ್ತಿರುತ್ತವೆ. ಇವುಗಳಲ್ಲಿ ಪ್ರತಿಯೊಂದು ಬೀಜಕ್ಕೂ ಒಂದೊಂದು ಪ್ಯಾರಾಚೂಟ್ ಗಳಿದ್ದು ಬೀಜಗಳನ್ನು ಗಾಳಿಯಲ್ಲಿ ತೇಲಿ ದೂರ ಸಾಗಿಸಲು ಅಥವಾ ತನ್ನ ಬೀಜಗಳನ್ನು ಪ್ರಸಾರಮಾಡಲು ಸಹಾಯ ಮಾಡುತ್ತವೆ. ಮತ್ತೆ ಕೆಲವು ದಕ್ಷಿಣ ಅಮೇರಿಕಾದ ಅಮೆಜಾನ್, ಆಫ್ರಿಕಾದ ಕಾಂಗೋ ಮತ್ತು ಆಗ್ನೇಯ ಏಷ್ಯಾದಂತಹ ಉಷ್ಣವಲಯದ ಮಳೆಕಾಡುಗಳಲ್ಲಿ ಬೆಳೆಯುವ ಕೆಲ ಮರಗಳು ತನ್ನ ಕಾಯಿಯಿಂದ ಹೊರಹೊಮ್ಮುವ ಬೀಜಗಳನ್ನು ಚಿಟ್ಟೆಯಂತೆ ತೇಲಲು ಅನುಕೂಲವಾಗುವಂತೆ ಮಾಡಿಕೊಂಡು ಬೀಜಪ್ರಸಾರ ಮಾಡಿಕೊಳ್ಳುತ್ತವೆ. ನಮ್ಮಲ್ಲಿನ ಮಹಾಗನಿ, ಕಿರಾಲ್ ಬೋಗಿ ಮತ್ತು ಜಾಲಾರಿ ಮರಗಳಂತೆ.



ನೀವು ಹಿಮಾಲಯನ್ ಬಾಲ್ಸಮ್ ಸಸ್ಯವನ್ನು ನೋಡಿರಬಹುದು. ಇದರ ಕಾಯಿಯನ್ನು ಮುಟ್ಟಿರಲೂಬಹುದು. ಇದರ ಕಾಯಿಯನ್ನು ಮುಟ್ಟಿದ ತಕ್ಷಣ ಕಾಯಿ ಸ್ಫೋಟಗೊಂಡು ತನ್ನ ಬೀಜಗಳನ್ನು ಹೊರಚೆಲ್ಲುತ್ತದೆ. ಮತ್ತೆ ಕೆಲ ಸಸ್ಯಗಳು ತನ್ನ ಕಾಯಿಗಳಿಗೆ ಮುಳ್ಳುಗಳನ್ನು ಮಾಡಿಕೊಂಡು ದನ, ಕುರಿ, ಮೇಕೆ ಮುಂತಾದ ಪ್ರಾಣಿಗಳ ತುಪ್ಪಳಕ್ಕೆ ಸಿಕ್ಕಿ ದೂರ ಸಾಗುವುದರ ಮೂಲಕ ಬೀಜಪ್ರಸಾರವಾಗುತ್ತದೆ.



ಸಸ್ಯಜಗತ್ತಿನ ವಿಕಾಸದಲ್ಲಿ ತಮ್ಮ ವಂಶಾಭಿವೃದ್ಧಿಗೆ ಸಸ್ಯಗಳು ಮಾಡಿಕೊಂಡಿರುವ ತಂತ್ರಗಾರಿಕೆ ಅದ್ಭುತವಾದದ್ದು. ಅದನ್ನು ಡೇವಿಡ್ ಅಟೆನ್ಬರೋರವರು 'ದಿ ಪ್ರೈವೇಟ್ ಲೈಫ್ ಆಫ್ ಪ್ಲಾಂಟ್ಸ್' ಸಾಕ್ಷ್ಯಚಿತ್ರದಲ್ಲಿ ಬಹಳ ಸುಂದರವಾಗಿ ವರ್ಣಿಸಿದ್ದಾರೆ. ಈ ಸಾಕ್ಷ್ಯಚಿತ್ರದಲ್ಲಿ ಶಿಲೀಂಧ್ರಗಳ ಅಥವಾ ಅಣಬೆ (ನಾಯಿಕೊಡೆ)ಗಳ ಬೀಜಪ್ರಸಾರದ ಬಗ್ಗೆ ಸವಿವರವಾಗಿ ಬಣ್ಣಿಸಿದ್ದಾರೆ. ಬರ್ಡ್ ಕೇಜ್ ಪ್ಲಾಂಟ್ (Birdcage plant) ಗಳಂತೆ ನೆಲದ ಮೇಲೆ ಗುಡುಗುತ್ತಾ ತನ್ನ ಬೀಜಕಗಳನ್ನು ಪ್ರಸಾರಮಾಡುವ ಭೂ ಚೆಂಡುಗಳೆಂಬ ಅಣಬೆ ಚೆಂಡಿನಾಕಾರದ ಮೇಲ್ಮೈ ರಚನೆ ಹೊಂದಿದ್ದು, ಹಳದಿ, ಮಾಸಲು ಬಿಳಿ ಇತ್ಯಾದಿ ಬಣ್ಣಗಳಿಂದ ಕೂಡಿರುತ್ತವೆ. ಇವು ದಪ್ಪವಾದ ಹೊರಪದರ ಹೊಂದಿದ್ದು, ಬೀಜೋತ್ಪತ್ತಿ ಒಳಗಡೆಯೇ ನಡೆಯುತ್ತದೆ. ಕಾಡಿನಲ್ಲಿ ಪ್ರಾಣಿಗಳು ಇವುಗಳನ್ನು ತುಳಿದಾಗ ಮತ್ತು ಕೆಲವೊಮ್ಮೆ ಒತ್ತಡದಿಂದ ಬೀಜಗಳು ತಾವಾಗಿಯೇ ಹೊರಚಿಮ್ಮಿ ಬೀಜ ಪ್ರಸಾರವಾಗುತ್ತದೆ. ನಮ್ಮ ಊರಿನ ಸುತ್ತಮುತ್ತಲಿನ ನೀಲಗಿರಿ ತೋಪುಗಳಲ್ಲಿ ಬೆಳೆಯುವ ಈ ಭೂ ಚೆಂಡುಗಳು, ನಮಗೆ ಆಟಿಕೆಯಾಗಿಯೂ ಬಳಕೆಯಾಗಿವೆ. ಇವುಗಳನ್ನು ನಮ್ಮ ಆಟದಲ್ಲಿ ಬಾಂಬ್ ಗಳಂತೆ ಬಳಸಿದ ನೆನಪು ಇಂದಿಗೂ ಹಾಗೆಯೇ ಇದೆ. ಇವುಗಳ ಬೀಜಪ್ರಸಾರದಲ್ಲಿ ಪ್ರಾಣಿಗಳ ಪಾತ್ರದ ಜೊತೆ ನಾವು ಕೂಡ ಇದ್ದೇವೆ ಎಂಬ ಖುಷಿ.

ಮತ್ತೊಂದು ಅಣಬೆ, ಭೂ ನಕ್ಷತ್ರ ಎಂಬ ಅಣಬೆ, ಇದು ಯಾವುದೋ ಮಳೆ ಕಾಡಿನಲ್ಲಿ ಮಾತ್ರ ಬೆಳೆಯುವ ಅಣಬೆ ಎಂದು ಡೇವಿಡ್ ಅಟೆನ್ಬರೋರವರು ಹೇಳುತ್ತಾರೆ. ಭೂ ನಕ್ಷತ್ರ...! ಇವು ಭೂಮಿಯ ಮೇಲೆ ನಕ್ಷತ್ರಾಕಾರವಾಗಿ ಅರಳುವುದರಿಂದ ಈ ಹೆಸರು ಬಂದಿರಬೇಕು. ಇವುಗಳ ಹೊರಪದರ ಬಿಚ್ಚಿ ನಕ್ಷತ್ರಗಳಂತೆ ಅರಳುತ್ತದೆ ಅದರ ಒಳಗಿನ ಪೊರೆ ಮುಚ್ಚಿದ್ದು ಒಂದೆರಡು ರಂಧ್ರಗಳಿದ್ದು, ಇವು ಬೀಜಾಣುಗಳು ಹೊರಬರಲು ಸಹಾಯ ಮಾಡುತ್ತವೆ. ಇವುಗಳು, ಹೊರಪದರ ನಕ್ಷತ್ರ ಗಳಂತೆ ಅರಳಿಸಿ ಮಳೆಯ ಹನಿಗಳಿಗಾಗಿ ಕಾಯುತ್ತವೆ.

ಮಳೆಯ ಹನಿಗಳು ಇವುಗಳ ಒಳಗಿನ ಪೊರೆ ಚೆಂಡಿನಂತೆ ಇದ್ದು. ಇದರ ಮೇಲೆ ಮಳೆಯ ಹನಿ ಬಿದ್ದಾಗ, ಪೊದರದ ಒಳಗೆ ಇರುವ ಬೀಜಕ(Spores)ಗಳನ್ನು ಹೊರ ಚಿಮ್ಮಿ ಬೀಜಕ ಪ್ರಸಾರವಾಗುತ್ತದೆ.


ಒಮ್ಮೆ ಪಕ್ಷಿವೀಕ್ಷಣೆಗೆಂದು ತೋಟಕ್ಕೆ ಹೋದ ನಮಗೆ ಈ ಭೂ ನಕ್ಷತ್ರ ಎಂಬ ಅಣಬೆ ಕಣ್ಣಿಗೆ ಬಿದ್ದದ್ದು ನಮಗೆ ಊಹಿಸಲಾಗದ ಸಂಗತಿ...! ಯಾವುದೋ ದೊಡ್ಡ ಮಳೆ ಕಾಡುಗಳಲ್ಲಿ ಸಿಗುವ ಈ ಅಣಬೆ ನಮ್ಮಲ್ಲಿ ಸಿಕ್ಕಿದೆ ಎಂಬ ಸಂಗತಿ ನಂಬಲಾಗಲೇ ಇಲ್ಲ. ಮನೆಗೆ ಬಂದು ಇದು ಭೂ ನಕ್ಷತ್ರವೇ ಅಥವಾ ಬೇರೆಯದೇ ಅಣಬೆಯೇ ಎಂಬ ಎಲ್ಲ ಸಂಶಯಗಳಿಗೆ ಉತ್ತರ ಹುಡುಕಲು ಹೊರಟ ನಮಗೆ, ಅದು ಭೂ ನಕ್ಷತ್ರವೇ ಎಂದು ಧೃಡಪಟ್ಟಾಗ ಬಹಳ ಸಂತೋಷವಾಗಿತ್ತು. 'ಬನ್ನೇರುಘಟ್ಟದಂತಹ ಎಲೆ ಉದುರುವ ಶುಷ್ಕ ಕಾಡು, ಮಳೆ ಕಾಡುಗಳಿಗೆ ತುಂಬ ಹತ್ತಿರವಾಗುತ್ತಿದೆ' ಎಂದೆನಿಸಿತು.



ಭೂ ನಕ್ಷತ್ರದ ಅದ್ಭುತ ವೀಡಿಯೊವನ್ನು ನೋಡಲು ಇಲ್ಲಿ ಸ್ಕ್ಯಾನ್ ಮಾಡಿ.

- ಅಶ್ವಥ .ಕೆ .ಎನ್,

ಬೆಂಗಳೂರು ನಗರ ಜಿಲ್ಲೆ.



# (ಭೂ)ಮಾತೆ

ಎನಿತು ದಯವೋ
ತಾಯೇ ನಿಂದು
ಸ್ತುತಿಸಲಾಗದು...

ನಿನ್ನ ರಶ್ಮಿಯಿರಲು
ಇಲ್ಲಿ ಎಲ್ಲ
ಹೊಳೆವವು..

ಪಂಚ ರತ್ನ
ಸಲಹೋ ಯತ್ನ
ಸದಾ ವಿಸ್ಮಯ.!

ನಿನ್ನ ಕರುಣೆ
ಹಾದಿಯಲ್ಲೇ
ಜೀವ ತಾಣವು..

ನಿನ್ನ ಒಲುಮೆಯಿರಲು
ತಾಯೇ..
ಬಾಳು ಪಾವನ.

ಲಕ್ಷ ನೀನೆ..
ಕೋಟಿ ನೀನೆ..
ಅನರ್ಘ್ಯ ರತ್ನವು..

ನಿನ್ನ ಒಡಲ
ಸೇರಲೆಂತು..
ನಾ ಚಿಕ್ಕ ಬಿಂದುವು..

ಮಮತೆಯಿರುವ
ಪ್ರೀತಿಯಿರುವ
ಸದಾಚಾರಿಣಿ..

ಕೋಪ-ತಾಪ ಎಲ್ಲ ನುಂಗಿ
ಪ್ರೇಮಧಾರೆ ಸೂಸುವಂತ
ಅಮೃತವರ್ಷಿಣಿ..

ಅಣು-ಅಣುವಲ್ಲಿ ವಿರಾಜವಂತೆ..
ಜಗದ ಒಡತಿ ನೀನೆಯಂತೆ..
ಸಲಹು ಮಾತೆಯೇ..

ದಾಹ ದಾಸ್ಯದಲ್ಲಿ ಬಿದ್ದು
ದೇಹ ತ್ಯಜಿಸುವ ಘಳಿಗೆ
ಮತ್ತೆ ಸೇರುವೆ...
ನಿನ್ನ ಪಡೆಯುವೆ.



- **ನಂದಕುಮಾರ್ ಹೊಳ್ಳ.ಎಸ್,**
ಅರ್ಥಶಾಸ್ತ್ರ ಉಪನ್ಯಾಸಕರು,
ಪಾಂಡೇಶ್ವರ ಗ್ರಾಮ, ಸಾಸ್ತಾನ.

# ಪ್ರಕೃತಿ ಬಿಂಬ



ಮಾನವರಾದ ನಾವು ಸಹಸ್ರಾರು ವರ್ಷಗಳಿಂದ ಕೆಲವು ಅಣಬೆಗಳನ್ನು ತಿನ್ನುತ್ತಾ ಬಂದಿದ್ದೇವೆ. ಇವು ನಮಗೆ ಬೇಕಾದ ಹಲವು ಕಿರುಪೋಷಕಾಂಶಗಳ ಆಗರ ಕೂಡ. ಅಣಬೆ ತಿಂದರೆ ಬೊಜ್ಜು ಕಡಿಮೆಯಾಗದಿದ್ದರೂ ಕ್ಯಾಲೋರಿ ಕಡಿಮೆ ಇರುವುದರಿಂದ ನೀವು ದಪ್ಪವಾಗುವುದಿಲ್ಲ. ನಮ್ಮ ದೇಹಕ್ಕೆ ಕಡಿಮೆ ಪ್ರಮಾಣದಲ್ಲಿ ಬೇಕಾದ ಕಿರು ಪೋಷಕಾಂಶಗಳಾದ ಸೆಲೇನಿಯಂ, ಗ್ಲುಟನ್, ಪೊಟಾಷಿಯಂ ರಿಬೊಪ್ಲಾವಿನ್, ಅಲ್ಲದೆ ವಿಟಮಿನ್ ಡಿ ಕೂಡ ಅಣಬೆ ಸೇವನೆಯಿಂದ ಸಿಗುತ್ತವೆ.



ಏಷ್ಯಾದ ಬಹು ಭಾಗಗಳಲ್ಲಿ ಅನಾದಿಕಾಲದಿಂದಲೂ ಅಣಬೆಗಳನ್ನು ಔಷಧೀಯ ಗುಣಗಳಿಗಾಗಿ ಬಳಸುತ್ತಿದ್ದಾರೆ. ಇವುಗಳಲ್ಲಿ ಕೆಲವು ರೋಗ ನಿರೋಧಕ ಶಕ್ತಿ ಹೆಚ್ಚಿಸಿದರೆ, ಇನ್ನು ಕೆಲವು ಕ್ಯಾನ್ಸರ್ ನಿರೋಧಕಗಳಾಗಿ, ಜೀವನಿರೋಧಕಗಳಾಗಿ, ವೈರಾಣು ನಿರೋಧಕಗಳಾಗಿ ಕೂಡ ಬಳಸುತ್ತಿದ್ದಾರೆ. ಮತ್ತೆ ಕೆಲವು ಅಣಬೆಗಳಲ್ಲಿ ನಮಗೆ ವಯಸ್ಸಾಗದಂತೆ ತಡೆಯುವ ಆಂಟಿ ಆಕ್ಸಿಡೆಂಟ್ ಆಗಿಬಳಸಿದರೆ, ಇನ್ನೂ ಕೆಲವನ್ನು ದೇಹದಲ್ಲಿ ಸಂಗ್ರಹವಾದ ಕೊಬ್ಬನ್ನು ಕರಗಿಸಲು ಪಿತ್ತಜನಕಾಂಗದ ರಕ್ಷಣೆಗೆ, ಸಕ್ಕರೆ ಕಾಯಿಲೆಯ ನಿಯಂತ್ರಣಕ್ಕೆ ಕೂಡ ಬಳಸುತ್ತಾರೆ.



ಕೆಲವು ಅಣಬೆಗಳು ಮಾಂತ್ರಿಕ ಅಣಬೆಗಳೆಂದು ಪ್ರಸಿದ್ಧಿಯಾಗಿವೆ. ಈ ಅಣಬೆಗಳನ್ನು ಸೇವಿಸಿದರೆ ಬುದ್ಧಿ ಕ್ಷೋಭೆಗೊಂಡು, ಭ್ರಮಾಲೋಕದಲ್ಲಿ ತೇಲಿದಂತೆ, ಸುಖಭೋಗದಲ್ಲಿ ಮುಳುಗಿದಂತೆ, ತಲೆತಿರುಗಿ ಹುಚ್ಚೆದ್ದು ಕುಣಿದಂತೆ, ಒಮ್ಮೊಮ್ಮೆ ಅತಿಕ್ರಮಣಶೀಲ ಗುಣಗಳು ಕಾಣಿಸುತ್ತದೆ. ಈ ಕಾರಣದಿಂದಲೇ ಈ ಮಾಂತ್ರಿಕ ಅಣಬೆಗಳನ್ನು ವಿಶ್ವದ ನಾನ ಭಾಗದ ಹಲವು ಬುಡಕಟ್ಟುಗಳ ಜನ ತಮ್ಮ ಸಾಂಪ್ರದಾಯಿಕ ಆಚರಣೆಗಳಲ್ಲಿ ಬಳಸುತ್ತಾರೆ.



ಇನ್ನು ಕೆಲವು ಅಣಬೆಗಳು ವಿಷಕಾರಿ. ತಿಂದರೆ ಜೀವಕ್ಕೆ ಹಾನಿ ಸಂಭವಿಸಬಹುದು. ಈ ವಿಷಕಾರಿ ಅಣಬೆಗಳಲ್ಲಿ ಇರುವ ಮೈಕೊ ಟಾಕ್ಸಿನ್ ಅಂಶ ದೇಹಕ್ಕೆ ಸೇರಿದೊಡನೆ ದೇಹದ ವಿವಿಧ ಅಂಗಾಂಗಗಳಲ್ಲಿನ ಜೀವಕೋಶಗಳಿಗೆ ಹಾನಿ ಉಂಟುಮಾಡುತ್ತದೆ. ಸೇವಿಸಿದ 6 ರಿಂದ 12 ಗಂಟೆಯ ಬಳಿಗೆ ಅಸಾಧಾರಣ ಹೊಟ್ಟೆನೋವು ಕಾಣಿಸಿಕೊಂಡು ಮೂತ್ರ ಕಟ್ಟಿ, ವಾಂತಿ, ರಕ್ತಬೇಧಿ ಕಾಣಿಸಿಕೊಂಡು ದೇಹದ ರಕ್ತದಲ್ಲಿ ಸಕ್ಕರೆ ಅಂಶ ಕಡಿಮೆಯಾಗಿ ಪ್ರಜ್ಞಾಹೀನಾವಸ್ಥೆಗೆ ತಲುಪಿ ವ್ಯಕ್ತಿಯ ಪ್ರಾಣಹಾನಿಕೂಡ ಸಂಭವಿಸುತ್ತದೆ.

ಹಲವು ಮಾರಣಾಂತಿಕ ಶಿಲೀಂಧ್ರಗಳು. ತಿನ್ನುವ ಅಣಬೆಗಳನ್ನೇ ಹೋಲುವುದರಿಂದ ಅನಾಹುತ ಸಂಭವಿಸುವ ಸಾಧ್ಯತೆ ಇನ್ನೂ ಹೆಚ್ಚು. ಈ ವಿಷಕಾರಿ ಅಣಬೆಗಳ ಹೆಸರೂ ಕೂಡ ಅಷ್ಟೇ ಭಯಾನಕ...! ಡೆತ್ ಕ್ಯಾಪ್, ಡೆಸ್ಟ್ರಾಯಿಂಗ್ ಏಂಜಲ್ಸ್, ಡೆಡ್ಲೀ ಡ್ಯಾಪರ್ಲಿಂಗ್ ಇವು ವಿಷಕಾರಿ ಅಣಬೆಗಳಲ್ಲಿ ಕೆಲವು.